2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್. ಸಿ ರವರ ನ್ಯಾಯಾಲಯ
ಕನಕಪುರ

ಸಿ.ಸಿ. ನಂಃ 966/2014

ಪಿರ್ಯಾದುದಾರರು ಃ ಕನಕಪುರ ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿಗಳು : ತಿಮ್ಮೇಗೌಡ ಮತ್ತು ಇತರರು

ದೋಷಾರೋಪಣೆ

ಶ್ರೀಮತಿ ಹೇಮಶ್ರೀ ಡಿ. 2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ಕನಕಪುರ, ಆದ ನಾನು ನಿಮ್ಮನ್ನು

ಆರೋಪಿಗಳು ಃ 1. ತಿಮ್ಮೇಗೌಡ ಬಿನ್
ಲೇಟ್ ಹೊಟ್ಟೆ ತಿಮ್ಮೇಗೌಡ ,
59 ವರ್ಷ ,
2. ತಾಯಮ್ಮ ಕೋಂ ತಿಮ್ಮೇಗೌಡ ,
50 ವರ್ಷ ,
3. ಕುಮಾರ ಬಿನ್ ತಿಮ್ಮೇಗೌಡ ,
22 ವರ್ಷ

ಎಲ್ಲರೂ ಅಂಜನಪುರ ಗ್ರಾಮ ,
ಕನಕಪುರ ತಾಲ್ಲೂಕು ವಾಸಿಗಳು .

ಈ ಕೆಳಗಿನಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

1) ಮೊದಲನೇಯದಾಗಿಃ ದಿಃ 11-4-2014 ರಂದು ಸಂಜೆ 6.30 ಗಂಟೆ ಸಮಯದಲ್ಲಿ ಅಂಜನಾಪುರ ಗ್ರಾಮದಲ್ಲಿ ಆರೋಪಿಗಳಾದ ನೀವು 1ನೇ ಸಾಕ್ಷಿದಾರರಿಗೆ ಸೇರಿದ ವಾಸದ ಮನೆಯ ಮುಂಭಾಗದ ಚರಂಡಿಯ ಬಳಿ 1ನೇ ಆರೋಪಿ ಚರಂಡಿಗೆ ಅಡ್ಡಲಾಗಿ ಇಟ್ಟಿದ್ದ ಕಲ್ಲನ್ನು 1ನೇ ಸಾಕ್ಷಿದಾರರು ತೆಗೆದ ವಿಚಾರದಲ್ಲಿ 1,2,3 ನೇ ಆರೋಪಿಗಳಾದ ನೀವು 1ನೇ ಸಾಕ್ಷಿದಾರರ ಜೊತೆ ಜಗಳ ತೆಗೆದು 1ನೇ ಆರೋಪಿಯಾದ ನೀವು ದೊಣ್ಣೆಯಿಂದ 1ನೇ ಸಾಕ್ಷಿದಾರರಿಗೆ ಬಲಹಣೆ , ಎದೆಯ ಎಡಭಾಗ , ಕಿಬ್ಬೊಟ್ಟೆ ಮೇಲೆ ಮತ್ತು 3ನೇ ಆರೋಪಿಯಾದ ನೀವು 1ನೇ ಆರೋಪಿಯ ಕೈಯಲ್ಲಿದ್ದ ದೊಣ್ಣೆಯನ್ನು ಕಸಿದುಕೊಂಡು ಅದೇ ದೊಣ್ಣೆಯಿಂದ 2ನೇ ಸಾಕ್ಷಿದಾರರಿಗೆ ಎಡಮೊಣಕ್ಕೆ ಮೇಲೆ ಹಾಗೂ 2 ನೇ ಆರೋಪಿ ಕಲ್ಲಿನಿಂದ 2ನೇ ಸಾಕ್ಷಿದಾರರ ತಲೆಯ ಮೇಲೆ ಹೊಡೆದು ರಕ್ತಗಾಯ ಗೊಳಿಸಿದ್ದು ಇದು ಭಾ.ದಂ.ಸಂಹಿತೆ ಕಲಂ 324 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ ಅಂತ ನಿಮ್ಮಗಳ ಮೇಲೆ ಆರೋಪ ಇದೆ.

2) ಎರಡನೆಯದಾಗಿಃ ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದ ಆರೋಪಿಗಳಾದ ನೀವು ಕೊಲೆ ಬೆದರಿಕೆ ಹಾಕಿದ್ದು ಇದು ಭಾ.ದಂ.ಸಂಹಿತೆ ಕಲಂ 506 ಸಹವಾಚಕ 34 ರಂತೆ ದಂಡಿಸಲ್ಪಡುವ ಅಪರಾಧವನ್ನು ಈ ಸಂಜ್ಞಾನದೊಳಗೆ ಮಾಡಿರುತ್ತೀರಿ ಎಂದು ನಿಮ್ಮಗಳ ಮೇಲೆ ಆರೋಪ ಇದೆ.

**(ಹೇಮಶ್ರೀ ಡಿ.)**
2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕನಕಪುರ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 240(2) ರಡಿಯಲ್ಲಿ ಆರೋಪಿಯ ಹೇಳಿಕೆಗಳುಃ

1) ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉ. 1.
2.
3.

2) ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗುವುದಕ್ಕೆ ಬಯಸುತ್ತೀರಾ?

ಉ. 1.
2.
3.

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ಓದಿ ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸುತ್ತೇನೆ.

(ಹೇಮಶ್ರೀ ಡಿ.)
2ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕನಕಪುರ.